ಕಥೆ



**ಶ್ರೀಧರ ಬಳಗಾರ**

ಕಲೆ: ವಿಶ್ವನಾಥ ಎ.ಎಸ್.

# ಬ್ಲ್ಯಾಕ್ ಫಾರೆಸ್ಟ್

ರೈಶನ್ಬಾಕ್ ಜರ್ಮನಿಯ ಸ್ಟುಟ್‌ಗಾರ್ಟ್ ಉಪ್ರಾಂತದಲ್ಲಿರುವ ಪುಟ್ಟ ಪಟ್ಟಣ. ಪುರಸಭೆಯನ್ನು ಪಡೆಯುವಷ್ಟು ಜನಸಂಖ್ಯೆಯಿರುವ ಪಟ್ಟಣದ ಸುತ್ತ ಒಂದೆರಡು ಮೈಲೊಳಗೆ ಹಾರಿ ಬಂದ ವಲಸೆ ಹಕ್ಕಿಗಳಂತೆ ಭಾಸವಾಗುವ ಚದುರಿದ ಹಳ್ಳಿಗಳಿವೆ. ತುಸು ಇಳಿಜಾರಿನ ಹಸುರು ಬೆಟ್ಟಗಳಲ್ಲಿ ಬಿಳಿ ಕಾಗದ ರಟ್ಟಿನಲ್ಲಿ ಕಟ್ಟಿದಂತಿರುವ ಸಮುದಾಯ ಮನೆಗಳಿವೆ. ರೇಖಾಗಣಿತದ ಚೌಕಟ್ಟು, ಆಯತಾಕಾರ ಮಾದರಿಗಳಂತಿರುವ ಸಮೂಹ ಮನೆಗಳ ಮೊದಲ ರಸ್ತೆಯ ಪಕ್ಕದಲ್ಲಿರುವ ಮೂರನೆ ಮನೆಯಲ್ಲಿ ಸುಬ್ರೊ ಕಳೆದ ಮೂರು ವರ್ಷಗಳಿಂದ ವಾಸವಾಗಿದ್ದಾನೆ. ಮನೆಯ ಉತ್ತರ ದಿಕ್ಕಿಗೆ ಋತುಮಾನಕ್ಕೆ ತಕ್ಕಂತೆ ಬಣ್ಣ ಬದಲಾಯಿಸುವ ಕನ್ಯತ್ವ ಕಾಪಾಡಿಕೊಂಡ ಮಾಯೆಯಂತೆ ಕಾಡಿದೆ. ನಡು ಅಂತಸ್ತಿನ ಅಡುಗೆ ಕೋಣೆಯ ತಿಳಿ ಗಾಜಿನ ಔಕಟ್ಟಿನಲ್ಲಿ ಸೇಬು ಮರಗಳ ಬೃಹತ್ ಗಾತ್ರದ ದನ ಮತ್ತು ಕುರಿಗಳು ಮೇಯುತ್ತಿರುವ ಹುಲ್ಲಿನ ಬಯಲು, ನಡುವೆ ಕೊಟ್ಟಿಗೆಯಂತ ಫಾರ್ಮ್ ಹೌಸುಗಳು, ಸಂಚರಿಸುವ ಸೈಕಲ್ ಮತ್ತು ಕುದರೆ ಸವಾರರು, ದ್ವೀಪದಂತಿರುವ ಮರಗಳ ಸಮುಚ್ಛಯ, ಬೆಟ್ಟದ ತಳದ ತಗ್ಗಿನುದ್ದಕ್ಕೆ ಮರಗಳ ಮರೆಯಲ್ಲಿ ಹರಿಯುತ್ತಿರುವ ನೆಕರ್ ನದಿ, ಅದರ ತಟದುದ್ದಕ್ಕೆ ಸಾಗಿದ ಆರು ಲೇನುಗಳ ವೇಗದ ಸದ್ದಿಗೆ ನಿದ್ದೆಗೆಟ್ಟ ಡಾಂಬರು ರಸ್ತೆ, ಬೆಳ್ಳಿ ಮೀನುಗಳಾಗಿ ಹಾರಾಡುವ ವಿಮಾನಗಳ ಶುಭ್ರ ನೀಲಾಕಾಶ ಮತ್ತು ದೂರದ ಗಿರಿ ಶ್ರೇಣಿಗಳು ಕೊಲಾಜ್ ಚಿತ್ರವಾಗಿ ಕೂತಿವೆ. ಬೆಳ್ಳಿತೆರೆಯಂತಹ ಚೌಕಟ್ಟಿನೊಳಗೆ ಗೋಚರಿಸುವ ಚಿತ್ರಗಳ ವರ್ಣ ಮತ್ತು ರೇಖೆಗಳ ವಿನ್ಯಾಸ ಅದೃಶ್ಯ ಚಿತ್ರಕಾರನ ಹಸ್ತದಿಂದ ದಿನದಲ್ಲಿ ಮೂರು ಮುಹೂರ್ತಗಳಲ್ಲಿ ಮರುಸಂಯೋಜನೆಗೊಳ್ಳುವುದನ್ನು ಶಂಕರ್ ರಾವ್ ಕಾಫಿ ಹೀರುತ್ತ ಸವಿಯುತ್ತಾರೆ. ಮರ್ಸಿಡಿಸ್ ಬೆಂಜ್ ವಾಹನ ತಯಾರಿಕಾ ಕಂಪನಿಯಲ್ಲಿ ವೃತ್ತಿ ಆರಂಭಿಸಿದ ನಂತರ ಸಹೋದ್ಯೋಗಿಗಳ ಸಂಬೋಧನೆಯಲ್ಲಿ ಸುಬ್ರಮಣ್ಯ ರಾವ್, ಸುಬ್ರೊ ಆಗಿದ್ದಾನೆ. ಧಾರವಾಡದ ಮನೆಯಲ್ಲಿ ಒಂಟಿಯಾದ ತಂದೆ ಶಂಕರ್ ರಾವ್ ಅವರನ್ನು ಸುಬ್ರೊ, ರೈಶನ್ಬಾಕ್‌ಗೆ ಕರೆಯಿಸಿಕೊಂಡು ಎರಡು ವಾರ ಕಳೆದಿದೆ.

ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಉದ್ಘೋಷಕರಾಗಿದ್ದ ಶಂಕರ್ ರಾವ್ ನಿವೃತ್ತಿಯಾಗಿ ವರ್ಷ ಕಳೆಯಿತು. ಹೆಂಡತಿಯ ದೇಹಾಂತ್ಯವಾಗಿ ಐದು ವರ್ಷಗಳು ಕಳೆದಿವೆ. ಹೆಂಡತಿಯ ಅಕಾಲಿಕ ಅಗಲಿಕೆಯ ನೋವು ಆಕಾಶವಾಣಿಯ ಕೆಲಸದಲ್ಲಿ ಮರೆತು ಹೋಗುತ್ತಿತ್ತು. ಮನೆಗೆ ಬಂದು ಬಾಗಿಲು ತೆರೆದು ದೀಪ ಬೆಳಗಿದೊಡನೆಯೇ ಹೆಂಡತಿಯ ಅನುಪಸ್ಥಿತಿಯ ಶೂನ್ಯ ಕಾಡುತ್ತಿತ್ತು. ನಿವೃತ್ತಿಯ ಬಳಿಕ ನೀರವ ಒಂಟಿತನ ಹಿಂಸೆಯಾಗಿ ಅರ್ಥ